**ಸಾಕ್ಷಿಯನ್ನು ದಿಃ 17.12.2024 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ರವರ ಪರ ಶ್ರೀ ಎನ್.ಎಸ್.ಜಿ. ವಕೀಲರಿಂದಃ–**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ ನಂ. 5 ರಲ್ಲಿ ನನ್ನ ತಂದೆ ಬಿ. ಕೆಂಪೇಗೌಡ ರವರ ಮರಣ ಹೊಂದಿರುತ್ತಾರೆ, ಬಿ. ಕೆಂಪೇಗೌಡರ ಮರಣಾ ನಂತರ ಬಿ. ಕೆಂಪೇಗೌಡರ ರವರ ಕಾನೂನುಬದ್ದ ವಾರಸುದಾರರಾದ ನಾನು ಮತ್ತು 1 ನೇ ಪ್ರತಿವಾದ, ವಾದಿ ಸದರಿ ಅಂದರೆ ಜಾರಿ ಸಂಖ್ಯೆ 47/2010 ರ ಪರಿಹಾರದ ಹಣವನ್ನು ಸಮವಾಗಿ ಪಡೆದುಕೊಂಡಿರುತ್ತೇವೆ ಎಂದು ಬರೆಸಿದ್ದೇನೆ ಎಂದರೆ ಸರಿ. ನನ್ನ ತಂದೆಯ ವಾರಸುದಾರರಾದ ನಮ್ಮ ಮಧ್ಯ ಯಾವುದೆ ನೊಂದಾಯಿತ ವಿಭಾಗ ಪತ್ರ ಆಗಿಲ್ಲ. ನನ್ನ ಮಗ 3 ನೇ ಪ್ರತಿವಾದಿ ಯಾವ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಿಸಿದ್ದಾನೆ ನಾನು ತಿಳಿದುಕೊಂಡಿಲ್ಲ. ಎಸ್. ಕುಮಾರ ಅಲಿಯಾಸ್ ವಿನಯ್ ಕುಮಾರ್ ಗೌಡ ಬಿನ್ ಕೆ. ಶಾಂತರಾಜು ಎಂದರೆ ನನ್ನ ಮಗ. ನನ್ನ ಮಗ ದಾಖಲಿಸಿದ ಕಂದಾಯ ಮೇಲ್ಮನವಿ ಸಂಖ್ಯೆ 39/2022 ಎಂದರೆ ಸರಿ. ಈಗ ನೋಡುತ್ತಿರುವ ದಾಖಲೆ ಸದರಿ ಪ್ರಕರಣದ ಆದೇಶದ ಪ್ರತಿ ಎಂದರೆ ಸರಿ. ಅದನ್ನು ನಿಡಿ. 98 ಎಂದು ಗುರುತಿಸಲಾಯಿತು. ಡಿ.ಸಿ ನ್ಯಾಯಾಲಯದಲ್ಲಿ ಯಾವ ಆದೇಶ ಆಗಿದೆ ಎಂದು ನಾನು ತಿಳಿದುಕೊಂಡಿಲ್ಲ. ನಿಡಿ. 98 ರ ಪ್ರಕಾರ ಮೇಲ್ಮನವಿ ಸಂಖ್ಯೆ 39/2022 ಅನ್ನು ತಿರಸ್ಕರಿಸಲಾಗಿದೆ ಎಂದರೆ ಗೊತ್ತಿಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಕೂಡ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮಗ ಅಂದರೆ ಈ ದಾವೆಯ 3 ನೇ ಪ್ರತಿವಾದಿ ನನ್ನ, 1 ನೇ ಪ್ರತಿವಾದಿ ಮತ್ತು ವಾದಿ ವಿರುದ್ಧ ಹುಣಸೂರು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಯದಲ್ಲಿ ಅಸಲು ದಾವೆ ಸಂಖ್ಯೆ 78/2014 ಅನ್ನು ದಾಖಲಿಸಿದ್ದ ಎಂದರೆ ಗೊತ್ತಿಲ್ಲ. ಮೃತ್ಯ ಪತ್ರದ ಪ್ರಕಾರ ತಾನು ಹಕ್ಕುದಾರನಾಗಿದ್ದು, ತನ್ನ ಹಕ್ಕನ್ನು ಘೋಷಿಸಬೇಕೆಂದು ಮೇಲೆ ಹೇಳಿದ ದಾವೆಯನ್ನು ನನ್ನ ಮಗ ಸಲ್ಲಿಸಿದ್ದ ಎಂದರೆ ಗೊತ್ತಿಲ್ಲ. ಸದರಿ ದಾವೆ ಏನಾಯಿತು ಎಂದು ತಿಳಿದುಕೊಂಡಿದ್ದಿರಾ ಎಂದರೆ ಆ ದಾವೆ ಬಗ್ಗೆ ಗೊತ್ತಿಲ್ಲ. ಸದರಿ ದಾವೆ **Dismiss for non prosecution** ಎಂದು ವಜಾಗೊಂಡಿದೆ ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು ಪಕ್ಷಗಾರನಾಗಿದ್ದು, ವಕೀಲರನ್ನು ನೇಮಿಸಿ ವಕಾಲತ್ ಸಲ್ಲಿಸಿದ್ದೆ ಎಂದರೆ ಗೊತ್ತಿಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಕೂಡ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಮೃತ್ಯು ಪತ್ರದ ಬಾಬ್ತು ನಾನು ನ್ಯಾಯಾಲಯದಿಂದ **succession Certificate**

ಪಡೆದುಕೊಂಡಿಲ್ಲ. ದಾವಾ ಸ್ವತ್ತುಗಳು ಸ್ವಯಾರ್ಜಿತ ಸ್ವತ್ತುಗಳು ಎಂದು ತೋರಿಸಲು ಯಾವ ದಾಖಲೆಗಳನ್ನು ಹಾಜರು ಪಡಿಸಿದ್ದಿರಿ ಎಂದರೆ ತಂದೆಯ ಹೆಸರಿನಲ್ಲಿ ಇದ್ದ ಎಲ್ಲ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ದಾವಾ ಐಟಂ ನಂ. 1 ರಿಂದ 3 ರ ಬಗ್ಗೆ ಕ್ರಯ ಪತ್ರ ಹಾಜರು ಪಡಿಸಿದ್ದಿರಾ ಎಂದರೆ ಇಲ್ಲ, ಎಂ.ಆರ್ ಮತ್ತು ಕೈ ಬರಹದ ಆರ್.ಟಿ.ಸಿ ಹಾಜರು ಪಡಿಸಿದ್ದೇನೆ, ಸಾಕ್ಷಿ ಮುಂದುವರೆದು ಸ್ವಲ್ಪ ನೊಂದಾಯಿತ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ. 1 ರಿಂದ 3 ರ ಬಗ್ಗೆ ಯಾವುದೆ ಕ್ರಯ ಪತ್ರಗಳನ್ನು ಹಾಜರು ಪಡಿಸಿಲ್ಲ ಎಂದರೆ, ಎಂ.ಆರ್ ಮತ್ತು ಕೈ ಬರಹದ ಪಹಣಿ ಕೊಟ್ಟಿದ್ದೇನೆ. ನನ್ನ ತಂದೆಗೆ ಯಾವುದೆ ಸ್ವಯಾರ್ಜಿತ ಆಸ್ತಿಗಳು ಇಲ್ಲ ಎಂದರೆ ಸರಿಯಲ್ಲ, ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ, ದಾವಾ ಸ್ವತ್ತುಗಳಲ್ಲಿ 1 ನೇ ಪ್ರತಿವಾದಿಗೂ ಕೂಡ ಸಮನಾದ ಹಿಸ್ಸೆಯ ಹಕ್ಕು ಇದೆ ಎಂದರೆ ಸರಿಯಲ್ಲ.

ದಿಃ 14.01.2011 ರಂದು ನಾನು ಮತ್ತು ನನ್ನ ತಂದೆ ಒಟ್ಟು ಕುಟುಂಬದ ಆಸ್ತಿಯನ್ನು ಮಾರಾಟ ಮಾಡಿ ಬೇರೆ ಆಸ್ತಿಯನ್ನು ಖರೀದಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಪತ್ರಕ್ಕೆ ಸಹಿ ಹಾಕಿದ್ದಿರಾ ಎಂದರೆ ತುಂಬಾ ದಿನಗಳಾದ ಕಾರಣ ಗೊತ್ತಿಲ್ಲ. ಈ ದಾವೆಯಲ್ಲಿ ನಾನು ಯಾವೆಲ್ಲಾ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎಂದು ತಿಳಿದುಕೊಂಡಿದ್ದೇನೆ . ನಿಡಿ. 8 ರ ಪ್ರಕಾರ ದಿಃ 27.01.2006 ರಂದು ನಾಗರಾಜು ರವರಿಗೆ ನಿವೇಶನ ಮಾರಾಟ ಮಾಡಲಾಗಿದೆ ಎಂದರೆ ನನ್ನ ತಂದೆ ಮಾರಾಟ ಮಾಡಿದ್ದಾರೆ. ಸದರಿ ನಿವೇಶನ ಮಾರಾಟ ಮಾಡಿ ಬಂದ ಹಣದಿಂದ ನನ್ನ ತಂದೆ ಬೇರೆ ಸ್ವತ್ತು ಖರೀದಿಸಿದ್ದಾರೆ ಎಂದರೆ ನನ್ನ ತಂಗಿ ವಾದಿಗೆ ಜಮೀನು ಮತ್ತು ಮನೆ ಕಟ್ಟಿ ಕೊಟ್ಟಿದ್ದಾರೆ. ಯಾವಾಗ ಖರೀದಿಸಿದ್ದಿರಿ ಎಂದರೆ ಗೊತ್ತಿಲ್ಲ. ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಜಮೀನು ಮಾರಾಟ ಮಾಡಿ ಬಂದ ಹಣವನ್ನು ವಾದಿಗೆ ಉಪಯೋಗಿಸಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ 2 ಸ್ವತ್ತುಗಳನ್ನು ಮಾರಾಟ ಮಾಡಿ ಸರ್ವೆ ನಂ. 32/1 ರಲ್ಲಿ 13 ಗುಂಟೆಯನ್ನು ಖರೀದಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಅಲ್ಲ ಎಂದರೆ ಸರಿಯಲ್ಲ. ಮೃತ್ಯು ಪತ್ರದ ಒಕ್ಕಣೆಗಳು ಗೊತ್ತಿಲ್ಲ. ಮೃತ್ಯು ಪತ್ರದ ಮೂಲಕ ದಾವಾ ಆಸ್ತಿಗಳಲ್ಲಿ ನನಗೆ ಯಾವುದೆ ಹಕ್ಕು ಭಾದ್ಯತೆಗಳು ಲಭ್ಯವಾಗುವುದಿಲ್ಲ ಎಂದರೆ ಸರಿಯಲ್ಲ. ಮೃತ್ಯು ಪತ್ರದಲ್ಲಿ ಕಾಣಿಸಿದ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ಮೃತ್ಯು ಪತ್ರವನ್ನು ಬರೆಯಲು ನನ್ನ ತಂದೆಗೆ ಯಾವುದೆ ಉದ್ದೇಶ ಮತ್ತು ಹಕ್ಕು ಇರಲಿಲ್ಲ ಎಂದರೆ ಗೊತ್ತಿಲ್ಲ. ನನ್ನ ತಂದೆ ದೈಹಿಕವಾಗಿ ಮತ್ತು ಮಾನಸೀಕವಾಗಿ ಮೃತ್ಯು ಪತ್ರ ಬರೆದುಕೊಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ನಿಡಿ. 93 ರಿಂದ 95 ರ ಭಾವ ಚಿತ್ರಗಳನ್ನು ಯಾವ ಕಾರಣಕ್ಕಾಗಿ ಹಾಜರು ಪಡಿಸಿದ್ದಿರಿ ಎಂದರೆ ನನ್ನ ತಂದೆ ನನ್ನ ಸೋದರ ಮಾವ ಮತ್ತು ನಮ್ಮ ಚಿಕ್ಕಮ್ಮನಿಗೆ ಜಮೀನು ಮಾರಾಟ ಮಾಡಿದ ಬಗ್ಗೆ ಹಾಜರು ಪಡಿಸಿದ್ದೇನೆ. ಮಾರಾಟ ಮಾಡಿದ ಬಗ್ಗೆ ಕ್ರಯ ಪತ್ರ ಇದೇಯೆ ಎಂದರೆ ಇಲ್ಲ ಸಾಗುವಳಿ ಜಮೀನು ಆಗಿದೆ. ನಿಡಿ. 87 ರಿಂದ 92 ರ ಭಾವ ಚಿತ್ರಗಳನ್ನು ಯಾವ ಕಾರಣಕ್ಕಾಗಿ ಹಾಜರು ಪಡಿಸಿದ್ದಿರಿ ಎಂದರೆ 1 ನೇ ಪ್ರತಿವಾದಿಯ ಹೆಸರಿಗೆ ಸಾಗುವಳಿ ಆದಕಾರಣ ಹಾಜರು ಪಡಿಸಿದ್ದೇನೆ, ಅದನ್ನು ನನ್ನ ತಂದೆ 1 ನೇ ಪ್ರತಿವಾದಿಯ ಹೆಸರಿಗೆ ಹಿರಿಯ ಮಗನಾದ ಕಾರಣ ಮಾಡಿಸಿಕೊಟ್ಟಿದ್ದಾರೆ. ನಿಡಿ. 87 ರಿಂದ 92 ರ ಭಾವ ಚಿತ್ರಗಳು 1 ನೇ ಪ್ರತಿವಾದಿಗೆ ಸೇರಿದ ಸ್ವಯಾರ್ಜಿತ ಆಸ್ತಿ ಬಗ್ಗೆ ಎಂದರೆ ಸರಿಯಲ್ಲ. ಆ ಬಗ್ಗೆ 1 ನೇ ಪ್ರತಿವಾದಿಯ ಹೆಸರಿಗೆ ದಾಖಲೆಗಳು ಆಗಿವೆಯೆ ಎಂದರೆ ಗೊತ್ತಿಲ್ಲ. ನಾನು ಹುಣಸೂರು ಈ.ಓ ನ್ಯಾಯಾಲಯದಲ್ಲಿ 1 ಪ್ರಕರಣ ದಾಖಲಿಸಿದ್ದೆ ನನಗೆ ಆರೋಗ್ಯ ಸರಿ ಇಲ್ಲದ ಕಾರಣ ಅದು ಏನಾಯಿತು ಗೊತ್ತಿಲ್ಲ. ಆ ಬಗ್ಗೆ ನಾನು ಆದೇಶದ ಪ್ರತಿಯನ್ನು ಪಡೆದುಕೊಂಡಿಲ್ಲ. ಈ.ಓ ನ್ಯಾಯಾಲಯದಲ್ಲಿ 1 ನೇ ಪ್ರತಿವಾದಿಯ ಪರವಾಗಿ ಆದೇಶವಾಯಿತು ಎಂದರೆ ಸರಿಯಲ್ಲ. ಅದರ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿಲ್ಲ.

ಸರ್ವೆ ನಂ. 71/6 ರಲ್ಲಿ 8 ಗುಂಟೆಯನ್ನು ಖರೀದಿಸಲು ಮುಳುಗಡೆಯಿಂದ ಬಂದ ಪರಿಹಾರದ ಹಣವನ್ನು ಉಪಯೋಗಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಆಗಿರುವ ಕಾರಣ ನನಗೂ, ವಾದಿಗೂ 1 ನೇ ಪ್ರತಿವಾದಿಗೂ ಸಮನಾದ ಹಿಸ್ಸೆಯು ಹಕ್ಕು ಇದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.